# ಮನ್ ಕಿ ಬಾತ್

ಸಂಪುಟ–2



# ಮನ್ ಕಿ ಬಾತ್

**ಸಂಪುಟ–2**


**Authors**
Sharda Mohan and Shashi Mukherjee

**Illustrations and Cover Art**
Dilip Kadam

**Assistant Artist**
Ravindra Mokate



**Production**
Amar Chitra Katha

**Published by**
Amar Chitra Katha Pvt. Ltd

Kannada

ISBN – 978-81-19242-56-6

Amar Chitra Katha Pvt. Ltd, June 2023



© Ministry of Culture, Govt of India, June 2023
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with **ACK Learn**, a unique learning platform that brings these stories to your school with a range of workshops. Find out more at **www.acklearn.com** or write to us at **acklearn@ack-media.com**.



ಕೋವಿಡ್–19ರ ಸಮಯದಲ್ಲಿ ನಾವು ಬಹಳ ದುಸ್ಥಿತಿಯಲ್ಲಿ ಬದುಕಿದೆವು. ಆ ಸಮಯದಲ್ಲಿ ನಾವೆಲ್ಲ ಬಹಳ ದೀರ್ಘಕಾಲ ನಮ್ಮ ಕುಟುಂಬಗಳೊಂದಿಗೆ ಮನೆಯೊಳಗೇ ಬಲವಂತವಾಗಿ ಇರಬೇಕಾಯಿತು. ಅವರಲ್ಲಿ ನನ್ನಂಥ ಕೆಲವರಿಗೆ ನಮ್ಮ ಪೋಷಕರೊಂದಿಗೆ, ಒಡಹುಟ್ಟಿದವರೊಂದಿಗೆ ಮತ್ತು ನಮ್ಮೊಂದಿಗೆ ಇರುವವರೊಂದಿಗೆ ಆ ಅವಧಿಯಲ್ಲಿ ಹೆಚ್ಚು ನಿಕಟವಾಗುವ ಸುಸಮಯವಾಯಿತು. ಆದರೆ ನಮ್ಮಲ್ಲಿ ಬಹಳ ಜನರಿಗೆ ಅದು ಕಷ್ಟದ ಸಮಯವಾಗಿತ್ತು. ದಿನದಿಂದ ದಿನಕ್ಕೆ ಒಟ್ಟಿಗೆ ಅಷ್ಟು ನಿಕಟವಾಗಿ ನೀವು ಹೇಗೆ ಬದುಕಿದಿರಿ?

ದುರದೃಷ್ಟವಶಾತ್, ಈ ಸಮಯದಲ್ಲಿ, ಈ ಮೊದಲು ಒಂದು ಕುಟುಂಬವಾಗಿ ನಮ್ಮನ್ನು ಬೆಸೆದಿದ್ದ ನಮ್ಮ ಪದ್ಧತಿಗಳನ್ನು ವರ್ಷಗಳು ಕಳೆದಂತೆ ಕಡೆಗಣಿಸಲಾಗಿದೆ ಎಂದು ನಾವು ಅರ್ಥಮಾಡಿಕೊಂಡೆವು. ಈ ಪದ್ಧತಿಗಳಿಲ್ಲದೆ, ಒಟ್ಟಿಗಿರುವುದರ ಸಂತೋಷವನ್ನು ಕಾಣುವುದು ಕಷ್ಟವೆಂದು ಕೆಲವು ಕುಟುಂಬಗಳು ಕಂಡುಕೊಂಡವು.

ನಮ್ಮನ್ನು ಒಟ್ಟಾಗಿರಿಸಿದ ಒಂದು ಪದ್ಧತಿಯೆಂದರೆ, ಹಿರಿಯರು ಕಥೆ ಹೇಳುವುದು, ಕುಟುಂಬದಲ್ಲಿ ಸಂತೋಷ, ಚೈತನ್ಯ ಮತ್ತು ತಾವೆಲ್ಲ ಒಂದೇ ಎಂಬ ಭಾವನೆಯನ್ನುಂಟುಮಾಡುತ್ತದೆ.

ಕಥೆಗಳು ಸೃಜನಶೀಲತೆ ಮತ್ತು ಸಂವೇದನಾಶೀಲತೆಯನ್ನು ತರುತ್ತವೆ. ಎಲ್ಲಿ ಹೃದಯವಿದೆಯೋ ಅಲ್ಲೊಂದು ಕಥೆಯಿದೆ. ನಾನು ಸಾಕಷ್ಟು ಚಿಕ್ಕವನಾಗಿದ್ದಾಗ, ಹಳ್ಳಿಯಿಂದ ಹಳ್ಳಿಯನ್ನು ಸುತ್ತುತ್ತ ಭಾರತದಾದ್ಯಂತ ಸಂಚರಿಸಿದೆ. ನಾನು ಹಳ್ಳಿಯ ಮಕ್ಕಳ ಜೊತೆಗೆ ಮಾತುಕತೆ ಮಾಡಿ ಒಂದು ಕಥೆ ಹೇಳುವಂತೆ ಕೇಳುತ್ತಿದ್ದೆ.

ಅವರು ಅದಕ್ಕೆ “ಇಲ್ಲ ಅಂಕಲ್, ನಾವು ನಿಮಗೊಂದು ಜೋಕ್ ಹೇಳುತ್ತೇವೆ. ನಂತರ ನೀವೂ ನಮಗೊಂದು ಜೋಕ್ ಹೇಳಿ” ಎಂದರು. ಈ ಮಕ್ಕಳಿಗೆ ಕಥೆಗಳ ಸಂತೋಷದ ಅರಿವಿಲ್ಲ ಎಂದು ನಾನು ಅಚ್ಚರಿಗೊಂಡೆ. ಭಾರತದಲ್ಲಿ ಕಥೆ ಹೇಳುವ ಸಂಪ್ರದಾಯ ಬಹಳ ಹಿಂದಿನ ಪ್ರಾಚೀನ ಕಾಲಕ್ಕೆ ಹೋಗುತ್ತದೆ. ಪಂಚತಂತ್ರ, ಹಿತೋಪದೇಶ ಅಥವಾ ಕಿಸ್ಸಾ ಗೋಯಿ*ಯ ಕಥೆಗಳಿರಬಹುದು. ಆ ಕಥೆಗಳು ಬುದ್ಧಿವಂತಿಕೆಯನ್ನು ಹಾಗೂ ಜೀವನ ಮೌಲ್ಯಗಳನ್ನು ಕಲಿಸುತ್ತವೆ.

ಈ ದಿನ, ಅನೇಕರು ತಮ್ಮದೇ ಆದ ಕಥೆ ಹೇಳುವ ವೇದಿಕೆಗಳನ್ನು ಆರಂಭಿಸಿದ್ದಾರೆ. ಅಮರ್ ವ್ಯಾಸ್ ಮತ್ತು ಅವರ ಮಿತ್ರರು Gaathastory.in ಆರಂಭಿಸಿದ್ದಾರೆ. ವೈಶಾಲಿ ವ್ಯಾವಹರೆ ದೇಶಪಾಂಡೆ ಗ್ರಾಮೀಣ ಜನಪದ ಮತ್ತು ರೈತರನ್ನು ಕುರಿತ ಕಥೆಗಳನ್ನು ಜನಪ್ರಿಯಗೊಳಿಸುತ್ತಿದ್ದಾರೆ. ಬೆಂಗಳೂರಿನ ವಿಕ್ರಂಶ್ರೀಧರ್ ಬಾಪು^ ಅವರ ಕಥೆಗಳನ್ನು ಹೇಳಲು ಇಷ್ಟಪಡುತ್ತಾರೆ. ಚೆನ್ನೈನ kathalaya.orgನ ಶ್ರೀವಿದ್ಯಾ ವೀರ ರಾಘವನ್ ಮತ್ತು ಗೀತಾ ರಾಮಾನುಜಂ ಇವರೆಲ್ಲ ಉತ್ತಮ ಕಥಾ ನಿರೂಪಕರು.

ನಾವು ನಾಯರ್ ಸರ್ ಅವರನ್ನು ಅವರ ಶಾಲೆಯಲ್ಲಿ ಸೇರಿಕೊಳ್ಳೋಣ. ಅವರು ಕಥೆ ಹೇಳುವವರ ಬಗ್ಗೆ ಮತ್ತು ನಮ್ಮ ಮನ್ ಕೀ ಬಾತ್ ಕಾರ್ಯಕ್ರಮದಿಂದ ಇನ್ನೂ ಅನೇಕ ಸ್ಫೂರ್ತಿದಾಯಕ ವ್ಯಕ್ತಿಗಳ ಬಗ್ಗೆ ಹೇಳುತ್ತಾರೆ.



* ಪ್ರಾಚೀನ ಉರ್ದು ಕಥೆ ಹೇಳುವ ಕಲಾರೂಪ

^ ಮಹಾತ್ಮ ಗಾಂಧಿ

# ಪರಿವಿಡಿ


| | | |
|---|---|---|
| 1 | ಕಥೆಗಳ ಬಗ್ಗೆ | 3 |
| 2 | ವೀರೇಂದ್ರ ಯಾದವ್ | 7 |
| 3 | ಉಷಾ ದುಬೆ | 10 |
| 4 | ಟಿ. ಶ್ರೀನಿವಾಸಾಚಾರ್ಯ | 13 |
| 5 | ಅನುದೀಪ್ ಮತ್ತು ಮಿನುಷಾ | 15 |
| 6 | ಸಲ್ಮಾನ್ | 18 |
| 7 | ಎನ್.ಎಸ್. ರಾಜಪ್ಪನ್ | 20 |
| 8 | ಸಿ.ವಿ. ರಾಜು | 23 |
| 9 | ಭಾಗೀರಥಿ ಅಮ್ಮ | 26 |
| 10 | ರಾಜೇಂದ್ರ ಜಾಧವ್ | 28 |
| 11 | ಗಾಯತ್ರಿ | 30 |


ಕಥೆಗಳ ಬಗ್ಗೆ
ಬೇಸಿಗೆ ರಜೆ ಮುಗಿಯಿತು ಮತ್ತು ಮಕ್ಕಳೆಲ್ಲ ಶಾಲೆಗೆ ಮರಳಿದರು.
ಹಲೋ ಇಕ್ಬಾಲ್! ನಾನೂ ಬಂದೆ ಇರು.
ಹಾಯ್ ಶ್ರೇಯಸ್! ನಿನ್ನನ್ನು ಕಂಡು ಸಂತೋಷವಾಯಿತು.
ಗುಡ್‌ಮಾರ್ನಿಂಗ್ ನಾಯರ್ ಸರ್!
ಗುಡ್ ಮಾರ್ನಿಂಗ್ ಶಾರದ! ಹಲೋ ಹುಡುಗರೇ! ಎಂದಿನಂತೆ ನಾನು ನಿಮ್ಮನ್ನು ಕಡೆಯ ಪೀರಿಯಡ್‌ನಲ್ಲಿ ನೋಡುತ್ತೇನೆ.
ಅನೇಕ ಕಥೆಗಳೊಂದಿಗೆ?
ಹಾ ಹಾ ಹಾ! ಹೌದು, ಅನೇಕ ಕಥೆಗಳೊಂದಿಗೆ.
ಎಲ್ಲ ಮಕ್ಕಳಿಗೂ ನಾಯರ್ ಸರ್ ಎಂದರೆ ತುಂಬ ಇಷ್ಟ. ಏಕೆಂದರೆ ಅವರು ಪ್ರಧಾನ ಮಂತ್ರಿಗಳ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಿಂದ ತೆಗೆದುಕೊಂಡ ಬಹಳ ಸ್ವಾರಸ್ಯಕರವಾದ ಕಥೆಗಳನ್ನು ಹೇಳುತ್ತಿದ್ದರು.
ದಿನದ ಕೊನೆಯಲ್ಲಿ ರೂಢಿಯಂತೆ ದೊಡ್ಡ ನಗುವಿನೊಂದಿಗೆ ದಾಪುಗಾಲು ಹಾಕುತ್ತ ಅವರು ಬಂದರು.
ನಾಯರ್ ಸರ್, ಇವತ್ತಿನ ಕಥೆ ಯಾವುದು?
ಇವತ್ತು ಕಥೆಗಳ ಮೇಲಿನ ಕಥೆ.
ಅದು ಹೇಗೆ ಸಾಧ್ಯ?


ನಾಯರ್ ಸರ್ ಅವರಿಗೆಲ್ಲ ತಮ್ಮ ಜಾಗಕ್ಕೆ ಹೋಗುವಂತೆ ಕೈ ಬೀಸಿದರು.
ಒಂದು ಸಲ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ, ನಮ್ಮ ಪ್ರಧಾನಿಯವರು ಬೆಂಗಳೂರಿನ ಕಥೆ ಹೇಳುವ ಸಂಘದ ಕಥೆ ಹೇಳುವ ಒಂದು ಗುಂಪಿನೊಂದಿಗೆ ಮಾತನಾಡಿದರು.
ಅಲ್ಲಿ ಅಪರ್ಣ, ಆತ್ರೇಯ, ಶೈಲಜ, ಸಂಪತ್, ಸೌಮ್ಯ ಶ್ರೀನಿವಾಸನ್, ಅಪರ್ಣ ಜೈಶಂಕರ್ ಮತ್ತು ಲಾವಣ್ಯ ಪ್ರಸಾದ್ ಇದ್ದರು. ಅವರಲ್ಲಿ ಪ್ರತಿಯೊಬ್ಬರೂ ವೃತ್ತಿಪರರು ಮತ್ತು ಕಥೆಗಳನ್ನು ಹೇಳುವ ಪ್ರೀತಿಯನ್ನು ಹೊಂದಿದ್ದರು.
ಅವರಲ್ಲಿ ಲಾವಣ್ಯ ಪ್ರಸಾದ್ ಅವರು ಹಿರಿಯರೊಂದಿಗೆ ಕುಳಿತು, ಅವರ ಕಥೆಗಳನ್ನು ಅವರ ಕುಟುಂಬಗಳಿಗಾಗಿ ಬರೆದುಕೊಳ್ಳುತ್ತಿದ್ದರು.
ಹೌದು, ಆಗಸ್ಟ್ 15, 1947ರಂದು ನನ್ನ ತಾತ ಒಬ್ಬ ಚಿಕ್ಕ ಹುಡುಗನಾಗಿದ್ದರು ಮತ್ತು ಅವರು ಮುಂಬೈನಲ್ಲಿ ಟ್ರಾಂನಲ್ಲಿ ಸಂಚರಿಸಿದ್ದನ್ನು ನೆನಪು ಮಾಡಿಕೊಳ್ಳುತ್ತಾರೆ. ಆಗ ಟ್ರಾಂ ಸವಾರಿ ಉಚಿತವಾಗಿತ್ತು.
ನನ್ನ ತಾತ ಸೇನೆಯಲ್ಲಿದ್ದರು. ಅವರು ತಾವು ಭಾಗವಹಿಸಿದ್ದ ಇಂಡೋ-ಚೀನಾ ಯುದ್ಧದ ಬಗ್ಗೆ ನನಗೆ ಅನೇಕ ಕಥೆಗಳನ್ನು ಹೇಳಿದರು.
ನಾನು ನನ್ನ ಕುಟುಂಬದಿಂದಲೂ ಕಥೆಗಳನ್ನು ಕಂಡುಹಿಡಿಯುತ್ತೇನೆ.
ಅದೊಂದು ಅದ್ಭುತ ಉಪಾಯ. ನಾವು ನಮ್ಮ ಕುಟುಂಬದ ಹಿರಿಯರಿಂದ ಕಥೆಗಳನ್ನು ಸಂಗ್ರಹಿಸಿ, ಇಲ್ಲಿ ತರಗತಿಯಲ್ಲಿ ಹಂಚಿಕೊಳ್ಳೋಣ. ಈಗ, ನಮ್ಮ ಕಥೆ ಹೇಳುವವರಲ್ಲಿ ಒಬ್ಬರು ಅಂದು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಹೇಳಿದ ಒಂದು ಕಥೆಯನ್ನು ಹೇಳುತ್ತೇನೆ.
ಸರಿ! ಸರಿ! ನಾವು ಕಥೆ ಕೇಳೋಣ.


ರಾಜ ಕೃಷ್ಣದೇವರಾಯ ಕೆರಳಿದ.
ಅವೇ ಹಳೆಯ ತರಕಾರಿಗಳು ! ಅದೇ ಸೋರೆಕಾಯಿ, ಕುಂಬಳಕಾಯಿ, ಆಲೂಗಡ್ಡೆ! ಇವುಗಳಿಂದ ನಾನು ಬೇಸತ್ತು ಹೋಗಿದ್ದೇನೆ. ಬೇರೆ ಏನಾದರೂ ಮಾಡುವಂತೆ ಅಡಿಗೆಯವನಿಗೆ ಹೇಳು. ಇಲ್ಲವಾದರೆ ಅವನನ್ನು ನೇಣಿಗೆ ಹಾಕುತ್ತೇನೆ.
ಉರ್ಕ್!
ಬಡಪಾಯಿ ಅಡುಗೆಯವನು ರಾಜನ ಆಪ್ತ ತೆನಾಲಿರಾಮನ ಬಳಿಗೆ ಓಡಿದ.
ಪ್ರಭುಗಳು ನಾನು ಮಾಡಿದ ಯಾವುದನ್ನೂ ಇಷ್ಟಪಡುವುದಿಲ್ಲ. ನನ್ನನ್ನು ನೇಣಿಗೆ ಹಾಕುತ್ತಾರೆ.
ಶ್! ಗೋಳಾಡುವುದನ್ನು ಬಿಡು. ನನ್ನ ಉಪಾಯವನ್ನು ಕೇಳಿಸಿಕೊ.
ಮರುದಿನ ಊಟದ ಸಮಯ –
ಇದು ಚೆನ್ನಾಗಿರಬೇಕು ಇಲ್ಲವಾದರೆ.....
ಆಹಾ! ಸ್ವಾದಿಷ್ಟವಾಗಿದೆ !
ಈ ಅದ್ಭುತ ತರಕಾರಿ ಯಾವುದು?
ಪ್ರಭು, ಇದು ಬದನೇಕಾಯಿ. ಅದು ನಿಮ್ಮ ಹಾಗೆ ರಾಜಕಿರೀಟ ಮತ್ತು ನೇರಳೆ ಬಣ್ಣದ ಉಡುಪು ಧರಿಸಿದೆ.
ಇಂದಿನಿಂದ ನಮ್ಮ ರಾಜ್ಯದ ಎಲ್ಲ ಜನರೂ ರಾಜ ಬದನೇಕಾಯಿ ಮಾತ್ರ ತಿನ್ನಬೇಕು.
ಆ್ಞ?
ಉಪಾಯ ಕೆಲಸ ಮಾಡುತ್ತಿದೆ.


ಬಂಡಿ ಬಂಡಿ ಬದನೆಕಾಯಿ ರಾಜ್ಯಕ್ಕೆ ಬಂತು. ಬೇರೆ ತರಕಾರಿಗಳೆಲ್ಲ ಮಾಯವಾದವು.
ಎಲ್ಲ ಕಡೆ ಬದನೆಕಾಯಿ ಬಳಸಿ ಬಗೆಬಗೆಯ ಅಡಿಗೆಯಾಗತೊಡಗಿತು.
ನಾನು ಈ ದಿನ ಬದನೆಕಾಯಿ ಸಾಂಬಾರು ಮಾಡಿದೆ. ನಾಳೆ ನಾನು ಬದನೆಕಾಯಿ ಭರ್ತ, ನಾಡಿದ್ದು ಬದನೆಕಾಯಿ ಲಡ್ಡು.
ಅದ್ಭುತ !
ಆದರೆ ಬಹಳ ಬೇಗನೆ –
ಇದೋ ಸ್ವಲ್ಪ ಬದನೆಕಾಯಿ ರಾಯ್ತ ಪ್ರಭು.
ಸ್ವಲ್ಪ ರುಚಿಯಾದ ಬದನೆಕಾಯಿ ಬಿರ್ಯಾ.....
ಸಾಕು! ಬದನೆಕಾಯಿ ಇನ್ನು ಬೇಡ. ಬದನೆಕಾಯಿಯನ್ನು ನನ್ನ ರಾಜ್ಯದಿಂದ ಬಹಿಷ್ಕರಿಸಿ !
ನಂತರ –
ನನ್ನ ಹಳೆಯ ತರಕಾರಿಗಳು ಮರಳಿದವು! ನೀವು ಗೆಲ್ಲಿಸಿದಿರಿ! ನಿಮ್ಮ ಉಪಾಯ ಸರಿಯಾಗಿತ್ತು.
ಹೇ ಹೇ! ನನ್ನ ರಾಜನನ್ನು ಸಮಾಧಾನಪಡಿಸುವುದು ಹೇಗೆಂದು ತಿಳಿಯದಿದ್ದರೆ ನಾನೆಂಥ ಮಂತ್ರಿಯಾಗುತ್ತೇನೆ?




* ಧ್ಯಾನಗಳನ್ನು ಒಕ್ಕಣೆ ಮಾಡಿದ ನಂತರ ಸಸ್ಯಗಳ ಉಳಿದ ಕಡ್ಡಿಕಸ.

^ ತಂದೆ




*ಒಣಹುಲ್ಲನ್ನು ಒತ್ತಿ ಬೇಲ್‌ಗಳಾಗಿ ಮಾಡುವ ಯಂತ್ರ.

^ಗಿಡಗಳನ್ನು ಸುಟ್ಟು ಅಥವಾ ಪ್ರಾಣಿಗಳ ಕಸದಿಂದ ಪಡೆಯುವ ಶಕ್ತಿ.

** ಕೃಷಿ ಚಟುವಟಿಕೆಗಳಿಂದ ವಿದ್ಯುತ್ ಉತ್ಪಾದಿಸುವ ಕಾರ್ಖಾನೆಗಳು.


ಮುಂದಿನ ಕೆಲವು ವರ್ಷಗಳಲ್ಲಿ, ರೈತರು ವೀರೇಂದ್ರನೊಂದಿಗೆ ಕೈಜೋಡಿಸಿದರು.
ನಾನು ನಾವೆಲ್ಲ ಭಾಗಿಗಳಾಗುವ ಒಂದು ಕೃಷಿ ಸಂಘವನ್ನು ಆರಂಭಿಸುತ್ತೇನೆ. ನಾವು ಸರ್ಕಾರದಿಂದ ರಿಯಾಯಿತಿ ದರದಲ್ಲಿ ಉಪಕರಣಗಳನ್ನು ಪಡೆಯಬಹುದು.
ಕೂಡಲೇ ಅವರು ಎರಡನೇ ಸಂಘವನ್ನು ಆರಂಭಿಸಿ, ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯಿಂದ ಶೇ. 80 ಸಹಾಯಧನವನ್ನು ಪಡೆದರು. ಕಡಿಮೆ ಬೆಲೆ ಎಂದರೆ ಹೆಚ್ಚು ಲಾಭ.
ಈ ಯಶಸ್ವೀ ಆರಂಭದ ವಾರ್ತೆ ಇಡೀ ರಾಜ್ಯಕ್ಕೆ ವ್ಯಾಪಿಸಿತು.
ಹಲೋ, ನಾನು ಸುಜನ್ ಸಿಂಗ್. ಕೈತಾಲ್‌ನ ಡೆಪ್ಯುಟಿ ಕಮೀಷನರ್, ಶುಭಾಶಯಗಳು.
ಪುತ್ರನೆ, ನಾನು ಮಿಸ್ಟರ್ ಕರಮ್‌ಚಂದ್, ಕೃಷಿ ಇಲಾಖೆಯ ಉಪನಿರ್ದೇಶಕ, ನಿಮ್ಮ ಕಾರ್ಯವನ್ನು ಪ್ರಶಂಸೆ ಮಾಡಲು ಕರೆ ಮಾಡಿದೆ.
ಬೇಸಿಗೆಯಲ್ಲಿ ಬೆಳೆ ಕೊಯ್ಲಿಗೆ ಬಂದಾಗ, ವೀರೇಂದ್ರ ಯಾದವ್ ತನ್ನ ನೆರವಿಗೆ 200ಕ್ಕಿಂತ ಹೆಚ್ಚು ಜನರನ್ನು ನೇಮಿಸಿಕೊಂಡರು.
ನಾನು ನಿನ್ನ ಬಗ್ಗೆ ಹೆಮ್ಮೆಪಡುತ್ತೇನೆ. ನೀನು ಕಸವನ್ನು ಸಂಪತ್ತಾಗಿ ಪರಿವರ್ತಿಸಿದೆ.
ಒಣಹುಲ್ಲನ್ನು ಸುಡುವ ಸಮಸ್ಯೆ ಬಗೆಹರಿಯಿತೆಂದು ನನಗೆ ಹೆಚ್ಚು ಸಂತೋಷವಾಗಿದೆ. ಕಡೆಗೂ ಗಾಳಿ ಶುದ್ಧವಾಯಿತು.
ಹೌದು, ನಿಜ. ನಿನ್ನ ತಾಯಿಯ ಆರೋಗ್ಯ ಸುಧಾರಿಸುತ್ತಿದೆ.
ವೀರೇಂದ್ರ ಯಾದವ್ ಕಥೆ ಹೇಳುತ್ತ ಪ್ರಧಾನಮಂತ್ರಿಗಳು, ಸಮಸ್ಯೆಗೆ ಕಾರಣವಾದ ಒಣಹುಲ್ಲಿನ ಕಸವನ್ನು ಉಪಯುಕ್ತ ಶಕ್ತಿಯಾಗಿ ಪರಿವರ್ತಿಸುವುದನ್ನು ಮತ್ತು ಅದು ಹೇಗೆ ಲಾಭದಾಯಕ ವ್ಯವಹಾರವಾಗುವುದೆಂದು ಹೇಳಿದರು.


ಉಷಾ ದುಬೆ
ಅದೊಂದು ದೆಹಲಿಯ ಬೇಸಿಗೆಯ ದಿನ.
ಉಹ್... ಇಂಥ ದಿನ ಶಾಲೆಗೆ ಬರುವುದು ಭಯಂಕರ.
ನನಗೆ ಗೊತ್ತು! ಆನ್‌ಲೈನ್ ತರಗತಿಗಳು ಎಷ್ಟೋ ಮೇಲು !
ಆನ್‌ಲೈನ್ ತರಗತಿಗಳಿದ್ದಾಗಲೂ ನೀನು ಅದರ ಬಗ್ಗೆ ಗೊಣಗುತ್ತಿದ್ದೆ.
ಕೆಲವರಿಗೆ ಆನ್‌ಲೈನ್ ತರಗತಿಗಳು ಅನುಕೂಲಕರ. ಆದರೆ ಹಲವು ಮಕ್ಕಳು ಕಷ್ಟಪಟ್ಟರು! ಈ ದಿನ ನಾನು 'ಕಿತಾಬೋವಾಲಿ ದೀದಿ'* ಬಗ್ಗೆ ಹೇಳುತ್ತೇನೆ.
ಹುರ್ರೇ, ಮನ್ ಕೀ ಬಾತ್ ಕಥೆ.
ಕೋವಿಡ್–19ರ ಸಮಯದಲ್ಲಿ ಲಾಕ್‌ಡೌನ್ ಪ್ರಕಟವಾದಾಗ, ಮಧ್ಯಪ್ರದೇಶದ ಸಿಂಗರುಲಿಯ ಸ್ಕೂಲ್ ಟೀಚರ್ ಉಷಾ ದುಬೆ ಚಿಂತಿತರಾದರು.
ಆನ್‌ಲೈನ್ ತರಗತಿಗಳು? ಈ ತರಗತಿಗಳಿಗೆ ಹಾಜರಾಗಲು ನಮ್ಮ ಮಕ್ಕಳಿಗೆ ಬೇಕಾದ ಸಾಧನಗಳಾಗಲಿ ಇಂಟರ್‌ನೆಟ್ ಸೌಲಭ್ಯವಾಗಲಿ ಇಲ್ಲ. ಅವರು ಹೇಗೆ ಅಭ್ಯಾಸ ಮಾಡಬೇಕು?
ಅವರ ಕಾಳಜಿಯೇ ಅವರ ವಿದ್ಯಾರ್ಥಿಗಳಲ್ಲಿ ಪ್ರತಿಧ್ವನಿಸಿತು.
ನಿಮ್ಮ ತರಗತಿಗಳು ಹೇಗೆ ನಡೆಯುತ್ತಿವೆ ಮಹಿಮಾ?
ನಾನು ಗಮನ ಕೊಡಲು ಪ್ರಯತ್ನಿಸುತ್ತಿದ್ದೇನೆ. ಆದರೆ ಆನ್‌ಲೈನ್ ತರಗತಿಗಳನ್ನು ಅನುಸರಿಸುವುದು ಕಷ್ಟ ಮಿಸ್. ಎಲ್ಲರೂ ಮನೆಯಲ್ಲಿರುತ್ತಾರೆ. ನನಗೂ ಕೂಡ ಗಮನವಿರುವುದಿಲ್ಲ.


ತಮ್ಮ ವಿದ್ಯಾರ್ಥಿ ಮಹಿಮಾ ಸಿಂಗ್ ಜೊತೆಗಿನ ಉಷಾ ಅವರ ಚರ್ಚೆ, ಒಂದು ಅದ್ಭುತ ಉಪಾಯಕ್ಕೆ ದಾರಿಯಾಯಿತು.
ಮಹಿಮಾ, ಮಕ್ಕಳು ಶಾಲೆಗೆ ಹೋಗಲಾಗದಿದ್ದರೆ, ನಾವು ಶಾಲೆಯನ್ನೇ ಅವರ ಬಳಿಗೆ ತೆಗೆದುಕೊಂಡು ಹೋಗೋಣ.
ಹಾಗಂದರೇನು ಮಿಸ್?
चलता फिरता पुस्तकालय
ತಮ್ಮ ಸ್ಕೂಟರಿನಲ್ಲಿ ಉಷಾ ತಮ್ಮ ವಿದ್ಯಾರ್ಥಿಗಳಿಗಾಗಿ ಒಂದು ಪುಸ್ತಕಾಲಯವನ್ನು ವ್ಯವಸ್ಥೆಗೊಳಿಸಿದರು.
ಇದೊಂದು ಅದ್ಭುತ ಉಪಾಯ!
ಉಷಾ ಮತ್ತು ಮಹಿಮಾ, ಗ್ರಂಥಾಲಯವನ್ನು ವ್ಯವಸ್ಥೆಗೊಳಿಸುತ್ತ, ವಿದ್ಯಾರ್ಥಿಗಳಿಗೆ ಬೋಧಿಸುತ್ತ ಹಳ್ಳಿಯಿಂದ ಹಳ್ಳಿಗೆ ಸಂಚರಿಸಿದರು.
ದೀದಿ, ನನಗೆ ಈ ಪಠ್ಯಪುಸ್ತಕ ತಂದದ್ದಕ್ಕಾಗಿ ಧನ್ಯವಾದ !
ನಮ್ಮ ಜೀರ್ಣಾಂಗ ವ್ಯವಸ್ಥೆಯಲ್ಲಿ ಆಹಾರ ಹೇಗೆ ಪಚನವಾಗುವುದೆಂದು ನಿಮಗೆ ಅರಿವಾಗಿದೆಯೇ?
ಹೌದು, ಹಿಂದಿನ ವಾರ ನಮ್ಮ ಆನ್‌ಲೈನ್ ತರಗತಿಯಲ್ಲಿ ಅದನ್ನು ಬೋಧಿಸಲಾಯಿತು. ಆದರೆ ಅದರಲ್ಲಿ ಬಹುಪಾಲನ್ನು ತಪ್ಪಿಸಿಕೊಂಡೆ. ಏಕೆಂದರೆ ಇಂಟರ್‌ನೆಟ್ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ.
ಮಹಿಮಾ ದೀದಿ, ನಾನು ಇದನ್ನು ಸರಿಯಾಗಿ ಬಿಡಿಸಿದ್ದೇನೆಯೇ?
ಹೌದು, ಒಳ್ಳೆಯ ಕೆಲಸ !




* ಹಿಂದಿಯಲ್ಲಿ ಪುಸ್ತಕಗಳ ಅಕ್ಕ

^ ಸಾಹಸಕ್ಕೆ ಒಂದು ನಮಸ್ಕಾರ




*ಧಾರ್ಮಿಕ ಮುಖಂಡ ಅಥವಾ ಗುರುವಿಗೆ ಗೌರವಾನ್ವಿತ ಸಂಬೋಧನೆ
^ಪವಿತ್ರವಾದ ಶಬ್ದಗಳಿಂದ ಕೂಡಿದ ನುಡಿಗಟ್ಟುಗಳು

**ಪೂಜೆ
^^ದೇವಾಲಯದ ದಿನನಿತ್ಯದ ವಿಧಿವಿಧಾನಗಳ ಮೇಲಿನ ಪುಸ್ತಕ.




* ತಮಿಳಿನಲ್ಲಿ ತಂದೆ

^ ತಮಿಳಿನಲ್ಲಿ ಅಜ್ಜ

# ಅನುದೀಪ್ ಮತ್ತು ಮಿನುಷಾ



ಈ ದಿನ ತರಗತಿಗಳು ಸ್ವಚ್ಛವಾಗಿಲ್ಲ. ಕಾರಿಡಾರುಗಳು ಕೊಳಕಾಗಿವೆ.
ಇಬ್ಬರು ಸ್ವಚ್ಛಗೊಳಿಸುವ ಹೆಂಗಸರೂ ಸ್ವಸ್ಥವಾಗಿಲ್ಲ. ಕಳೆದ ಎರಡು ದಿನಗಳಿಂದ ಅವರು ಬಂದೇ ಇಲ್ಲ.
ನಾವು ನಮ್ಮ ತರಗತಿಯನ್ನು ಸ್ವಚ್ಛಗೊಳಿಸಲು ಪ್ರಯತ್ನಿಸಿದೆವು. ಆದರೆ ಶಾಲೆ ಬಹಳ ದೊಡ್ಡದು. ಇಡೀ ಶಾಲೆಯನ್ನು ನಾವು ಹೇಗೆ ತಾನೇ ಸ್ವಚ್ಛಗೊಳಿಸಬಲ್ಲೆವು?
ಸರಿ, ನೀವೆಲ್ಲ ಒಟ್ಟಿಗೆ ಬಂದರೆ ಇಡೀ ಶಾಲೆಯನ್ನು ಸ್ವಚ್ಛಗೊಳಿಸುವುದು ಸಾಧ್ಯ. ಇಡೀ ಬೀಚನ್ನು ಸ್ವಚ್ಛಗೊಳಿಸಿದ ಅನುದೀಪ್ ಮತ್ತು ಮಿನುಷಾ ಅವರ ಬಗ್ಗೆ ಹೇಳುತ್ತೇನೆ. ಪ್ರಧಾನಮಂತ್ರಿಗಳಿಗೂ ಕೂಡ ಅವರ ಕಥೆ ಸ್ಫೂರ್ತಿದಾಯಕವಾಗಿ ಕಂಡಿತು.
ನವೆಂಬರ್ 2020ರಲ್ಲಿ ಕರ್ನಾಟಕದ ಬೈಂದೂರಿನಲ್ಲಿ ಅನುದೀಪ್ ಹೆಗ್ಡೆ ಮತ್ತು ಮಿನುಷಾ ಕಾಂಚನ್ ವಿವಾಹವಾದರು.
ಸದಾ ಸಂತೋಷವಾಗಿರಿ!
ಕೋವಿಡ್–19ರಲ್ಲೂ ಇದು ಒಂದು ಸುಂದರ ಆಚರಣೆ.
ಅದಾದ ನಂತರ–
ನಾನು ನಮ್ಮ ಮಧುಚಂದ್ರಕ್ಕೆ ಲಕ್ಷದ್ವೀಪಕ್ಕೆ ಹೋಗಲು ಯೋಚಿಸಿದ್ದೆ.
ನಾನು ಹಿಮಾಚಲಕ್ಕೆ ಹೋಗಲು ಬಯಸಿದ್ದೆ. ಆದರೆ ಎಲ್ಲ ಕಡೆ ಕೋವಿಡ್ ಇರುವುದರಿಂದ ಪ್ರಯಾಣ ಅಪಾಯಕಾರಿ.
ಎಲ್ಲಿಗೂ ಹೋಗಲಾಗದಿದ್ದುದರಿಂದ ದಂಪತಿ ಸಂಜೆಯ ವೇಳೆ ಹತ್ತಿರದ ಸೋಮೇಶ್ವರ ಬೀಚ್‌ನಲ್ಲಿ ಕಳೆಯಲು ನಿರ್ಧರಿಸಿದರು.
ಇಲ್ಲಿ ನನಗೆ ಇಷ್ಟವಾಗುತ್ತದೆ.
ಹೌದು, ಸೂರ್ಯ ಮತ್ತು ಮರಳನ್ನು ಕಂಡರೆ, ಲಾಕ್‌ಡೌನ್ ಅಷ್ಟು ಕೆಟ್ಟದ್ದಲ್ಲ.




* ಕರ್ನಾಟಕದ ಕುಂದಾಪುರದ ಸ್ವಚ್ಛಗೊಳಿಸುವ ಮಿತ್ರರ ಒಂದು ಗುಂಪು. ಈಗ ಅನೇಕ ಸ್ವಯಂಸೇವಕರು ಈ ಯೋಜನೆಗಾಗಿ ತಮ್ಮ ಭಾನುವಾರಗಳನ್ನು ಮೀಸಲಿರಿಸಿದ್ದಾರೆ.


ಕೆಲವು ದಿನಗಳ ನಂತರ –
ಅಡ್ಡಿಯಿಲ್ಲ. ಬೀಚಿನ ದೊಡ್ಡ ಪ್ರದೇಶವನ್ನು ನಾವು ಸ್ವಚ್ಛಗೊಳಿಸಿದಂತೆ ಕಾಣುತ್ತಿದೆ.
ಹೌದು. ಆದರೆ ಇನ್ನೂ ಹೆಚ್ಚು ಜನ ನಮ್ಮ ಜೊತೆ ಕೈ ಜೋಡಿಸಲು ಬಯಸುತ್ತೇನೆ.
ನನಗೊಂದು ದಾರಿ ಗೊತ್ತಿದೆ!
ತಮ್ಮ ಪ್ರಯತ್ನವನ್ನು ಅನುದೀಪ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ.
ನಂತರ–
ನಾನು ಮಂಜುನಾಥ್.
ನಾನು ಹಸನ್. ನಾವು ಈ ಸ್ವಚ್ಛತಾ ಕಾರ್ಯದಲ್ಲಿ ನಿಮ್ಮ ಜೊತೆ ಸೇರುತ್ತೇವೆ.
ಅದು ಅದ್ಭುತ !
ಬೇಗನೇ ಹೆಚ್ಚು ಹೆಚ್ಚು ಜನ ಅವರ ಜೊತೆ ಸೇರಲು ಮುಂದಾದರು.
ಅವರು ಒಟ್ಟಾಗಿ ಬೀಚ್‌ನ ಶೇ. 80ರಷ್ಟನ್ನು ಸ್ವಚ್ಛಗೊಳಿಸಿ, ಸುಮಾರು 800 ಕೆ.ಜಿ.ಗಳಷ್ಟು ಕಸವನ್ನು ಸಂಗ್ರಹಿಸಿದರು.
ನೋಡು ಈಗ ಬೀಚ್ ಎಷ್ಟು ಸುಂದರವಾಗಿ ಕಾಣುತ್ತಿದೆ.
ಅದು ಮತ್ತೆ ಉಸಿರಾಡಲು ಆರಂಭಿಸಿದೆ.
ಕೆಲವು ದಿನಗಳ ನಂತರ–
ನಾವು ಇನ್ನೂ ಹೆಚ್ಚಿನದನ್ನು ಮಾಡಬಹುದು. ಚಲನಚಿತ್ರಗಳ ರಾತ್ರಿಗಳನ್ನು ವ್ಯವಸ್ಥೆ ಮಾಡಿದರೆ ಹೇಗೆ? ನೌಕಾಜೀವನದ ಬಗ್ಗೆ ನಮ್ಮ ಸ್ಥಳೀಯ ಮೀನುಗಾರರಿಗೆ ಚಿತ್ರಗಳನ್ನು ತೋರಿಸಬಹುದು.
ಖಂಡಿತ; ನಮ್ಮ ಕೆಲಸ ಇಲ್ಲಿಗೇ ಮುಗಿಯಲಿಲ್ಲ. ನಿಜವಾಗಲೂ ಇದು ಕೇವಲ ಆರಂಭ.
ಅನುದೀಪ್ ಮತ್ತು ಮಿನುಷಾ ತಮ್ಮ ಒಳ್ಳೆಯ ಕೆಲಸವನ್ನು ಮುಂದುವರಿಸಿದರು. “ಒಟ್ಟಾಗಿ ನಾವು ಏನು ಬೇಕಾದರೂ ಸಾಧಿಸಬಹುದು” ಎಂಬುದು ಅವರ ಘೋಷವಾಕ್ಯ.

# ಸಲ್ಮಾನ್


ಸರ್, ಒಂದು ಅಪಘಾತದಲ್ಲಿ ತನ್ನ ಕಾಲು ಕಳೆದುಕೊಂಡ ನಮ್ಮ ಚಿಕ್ಕಪ್ಪ, ಇದೀಗ ರೋಬೋಟ್ ತರಹ ಒಂದು ಕೃತಕ ಕಾಲನ್ನು ತೆಗೆದುಕೊಂಡಿದ್ದಾರೆ. ಆದರೆ ಅದರಿಂದ ನಡೆಯುವುದು ಅವರಿಗೆ ಕಷ್ಟವಾಗುತ್ತಿದೆ.
ಹೌದು ಸುಜಿತ್, ಅದಕ್ಕೆ ಒಗ್ಗಿಕೊಳ್ಳಲು ಸ್ವಲ್ಪ ಸಮಯ ಬೇಕು.
ಕೃತಕ ಕಾಲಿನಿಂದಲೇ ಸ್ಪರ್ಧೆಗಳಲ್ಲಿ ಜಯ ಗಳಿಸಿದ ಒಬ್ಬ ಆಟಗಾರನನ್ನು ನಾನು ಕೇಳಿದ್ದೇನೆ.
ಅದು ನಿಜ ಪಾರುಲ್. ದೈಹಿಕ ವಿಕಲತೆಯುಳ್ಳವರೂ ಮಹಾ ಯಶಸ್ಸನ್ನು ಗಳಿಸಿದ್ದಾರೆ. ನಡೆಯಲೂ ಸಾಧ್ಯವಿಲ್ಲದಿದ್ದರೂ ಯಶಸ್ವೀ ಉದ್ಯಮಿಯಾದ ಸಲ್ಮಾನರ ಬಗ್ಗೆ ನಮ್ಮ ಈ ದಿನದ ಕಥೆ.
ಸಲ್ಮಾನ್ ಉತ್ತರಪ್ರದೇಶದ ಹಮೀರ್‌ಪುರ್ ಎಂಬ ಹಳ್ಳಿಯಲ್ಲಿ ಹುಟ್ಟಿದರು. ಅವರು ಬಹಳ ಚಿಕ್ಕವರಾಗಿದ್ದಾಗ–
ಸಲ್ಮಾನನಿಗೆ ಜ್ವರ ಬಂದಿದೆ. ಅವನು ಒಂದೇ ಸಮನೆ ಅಳುತ್ತಿದ್ದಾನೆ.
ಅವನನ್ನು ಆಸ್ಪತ್ರೆಗೆ ಕರೆದೊಯ್ಯೋಣ.
ಬೇಗನೇ–
ಸಲ್ಮಾನ್ ಪೋಲಿಯೋ ಪೀಡಿತನಾದ. ಮಾಂಸಖಂಡಗಳು ನಡೆದಾಡಲೂ ಸಾಧ್ಯವಾಗದೆ ಶಕ್ತಿಹೀನವಾದವು.
ಅಯ್ಯೋ, ಇವನು ಈ ಜಗತ್ತಿನಲ್ಲಿ ಹೇಗೆ ಬಾಳಬಲ್ಲ?
ವರ್ಷಗಳು ಕಳೆದಂತೆ ಸಲ್ಮಾನನ ಕಾಲುಗಳು ಶಕ್ತಿಹೀನವಾದರೂ, ಅವನು ಹೆಚ್ಚು ಆತ್ಮವಿಶ್ವಾಶದಿಂದ ಬೆಳೆದ. ಅವನು ತನ್ನ 12ನೇ ತರಗತಿ ಪರೀಕ್ಷೆ ಪಾಸು ಮಾಡಿದಾಗ –
ಅಮ್ಮ, ನಾನೀಗ ಸ್ವಾವಲಂಬಿಯಾಗಬೇಕು. ಒಂದು ಸರ್ಕಾರಿ ಕೆಲಸಕ್ಕೆ ಅರ್ಜಿ ಹಾಕಲು ಆರಂಭಿಸುತ್ತೇನೆ.



ಅವನು ಎಷ್ಟು ಕಷ್ಟಪಟ್ಟರೂ ಕೆಲಸ ಸಿಕ್ಕಲಿಲ್ಲ. ಒಂದು ದಿನ–
ಒಂದು ವೇಳೆ ನನಗೆ ಯಾರೂ ಕೆಲಸ ಕೊಡದಿದ್ದರೆ, ನಾನೇ ನನ್ನ ಸ್ವಂತ ಕಂಪನಿ ಆರಂಭಿಸುತ್ತೇನೆ.
ನಂತರದ ಕೆಲವು ವರ್ಷಗಳಲ್ಲಿ ಸಲ್ಮಾನ್ ಚಪ್ಪಲಿಗಳು ಮತ್ತು ಮಾರ್ಜಕಗಳನ್ನು ತಯಾರಿಸುವುದನ್ನು ಕಲಿತುಕೊಂಡ. ಸಾಲದ ಸಹಾಯದಿಂದ ಅವನು ಟಾರ್ಗೆಟ್ (ಗುರಿ) ಎಂಬ ಕಂಪನಿಯನ್ನು ಆರಂಭಿಸಿದ.
ಬನ್ನಿ, ಚಪ್ಪಲಿಗಳನ್ನು ಹೇಗೆ ಮಾಡುವುದೆಂದು ತೋರಿಸುತ್ತೇನೆ.
ಕಂಪನಿ ಬರಬರುತ್ತಾ ಜನಪ್ರಿಯವಾಯಿತು. ಒಂದು ದಿನ–
ಅಪಘಾತದಲ್ಲಿ ಒಂದು ತೋಳು ಕಳೆದುಕೊಂಡಿದ್ದರಿಂದ ಎಲ್ಲೂ ನನಗೆ ಕೆಲಸ ಸಿಗುತ್ತಿಲ್ಲ. ನೀವು ಕೆಲಸ ಕೊಡುವಿರಾ?
ಇಲ್ಲಿ ನೀನೇನು ಮಾಡಬಲ್ಲೆಯೆಂದು ನೋಡೋಣ. ನಾವು ಕೆಲಸ ಮಾಡಲು ಸಮಾನ ಅವಕಾಶ ಪಡೆಯಬೇಕು ಮತ್ತು ಯಶಸ್ವಿಯಾಗಬೇಕು.
ಮುಂದಿನ ಎರಡು ವರ್ಷಗಳಲ್ಲಿ ಸಲ್ಮಾನ್ ದೈಹಿಕ ವಿಕಲತೆಯುಳ್ಳ ಅನೇಕರನ್ನು ಕೆಲಸಕ್ಕೆ ತೆಗೆದುಕೊಂಡ.
ಈಗ ನಮ್ಮ ಜೊತೆ 30 ಅಂಗವಿಕಲರು ಕೆಲಸ ಮಾಡುತ್ತಿದ್ದಾರೆ. ಇಂಥ ಇನ್ನಷ್ಟು ಜನರಿಗೆ ಕೆಲಸ ಕೊಡುವಂತಾಗಬೇಕು.
ಪ್ರಧಾನಮಂತ್ರಿಗಳು ಮನ್ ಕೀ ಬಾತ್‌ನಲ್ಲಿ ಸಲ್ಮಾನನ ಕಥೆಯನ್ನು ನೆನಪಿಸಿಕೊಂಡಿದ್ದಾರೆ.
ಸಲ್ಮಾನ್ ಭಾಯಿ, ಪ್ರಧಾನಮಂತ್ರಿಗಳು ನಿನ್ನ ಸಾಹಸವನ್ನು ಪ್ರಶಂಸೆ ಮಾಡಿದ್ದಾರೆ.
ನೀನು ನಮಗೆಲ್ಲ ಒಂದು ಸ್ಫೂರ್ತಿ....
ಧನ್ಯವಾದಗಳು.

# ಎನ್.ಎಸ್. ರಾಜಪ್ಪನ್




*ಕೇರಳದ ಒಂದು ಪ್ರಸಿದ್ಧ ಸರೋವರ ಮತ್ತು ಪ್ರವಾಸಿ ತಾಣ.


ರಾಜಪ್ಪನ್ ದೋಣಿ ನಡೆಸತೊಡಗಿದಾಗ –
ಪ್ಲಾಸ್ಟಿಕ್ ಮೀನು? ನಾನೂ ಅದನ್ನು ನೋಡಬಹುದೆ ರಾಜಪ್ಪನ್?
ಖಂಡಿತ! ಒಳಗೆ ಬನ್ನಿ.
ನಂತರ –
ಅಲ್ಲಿ ನೋಡಿ, ನನ್ನ ಈ ದಿನದ ಬೇಟೆ! ಬಾ ಪ್ಲಾಸ್ಟಿಕ್, ನಾನು ನಿನ್ನನ್ನು ಇಲ್ಲಿಂದ ಹೊರತೆಗೆಯಬೇಕು.
ಓ, ಇವೇ ಪ್ಲಾಸ್ಟಿಕ್ ಮೀನುಗಳೇ?
ಕೆಲವು ಗಂಟೆಗಳ ನಂತರ–
ಸರೋವರ ಈಗ ಸ್ವಚ್ಛವಾಗಿ ಕಾಣುತ್ತಿದೆ. ನೀವು ಇದನ್ನು ಮಾಡುವ ಸಾಹಸ ತೋರಿದ್ದೀರಿ. ನಿಮ್ಮ....
....ನನ್ನ ಕಾಲುಗಳು ಸಹಾಯ ಮಾಡದಿದ್ದರೂ ನಾನು ಇದನ್ನು ಮಾಡುತ್ತಿದ್ದೆ. ಆದರೆ ನೀರಿನಿಂದ ಪ್ಲಾಸ್ಟಿಕ್ ಹೊರತೆಗೆಯಲು ದೋಣಿ ನಡೆಸುವುದು ಸುಲಭ ಮತ್ತು ಅದರಿಂದ ಹಣ ಗಳಿಸುತ್ತೇನೆ.
ಮಧ್ಯಾಹ್ನ ಊಟಕ್ಕಾಗಿ ಅವರು ಬಿಡುವು ಪಡೆದರು.
ನೀವು ಯಾವಾಗಿನಿಂದ ಈ ಕೆಲಸ ಮಾಡುತ್ತಿರುವಿರಿ? ಇದು ಕಷ್ಟದ ಕೆಲಸವಲ್ಲವೆ?
ಇದು ವರ್ಷಗಳಿಂದ ನಡೆದಿದೆ. ಆದರೆ ನನ್ನಲ್ಲಿ ಯಾವುದೇ ದೂರುಗಳಿಲ್ಲ. ಈ ಸರೋವರ ನನ್ನ ಮನೆ. ಇದು ಸ್ವಚ್ಛವಾಗಿರುವುದು ನನಗೆ ತೃಪ್ತಿ ನೀಡುತ್ತದೆ.
ಅವನು ಬಹಳ ನಿಸ್ವಾರ್ಥಿ.


ಹಲವು ಗಂಟೆಗಳ ಸ್ವಚ್ಛೀಕರಣದ ನಂತರ ರಾಜಪ್ಪನ್ ತನ್ನ ದೋಣಿಯನ್ನು ದಡಕ್ಕೆ ನಡೆಸಿದ.
ಈಗ ನೀವೇನು ಮಾಡುತ್ತೀರಿ?
ನಾನು ಪ್ಲಾಸ್ಟಿಕ್‌ಅನ್ನು ವಿಂಗಡಿಸುತ್ತೇನೆ. ಅದು ಮತ್ತೆ ನೀರಿಗೆ ಹಿಂದಿರುಗದಂತೆ ಖಚಿತಪಡಿಸಿಕೊಳ್ಳುತ್ತೇನೆ. ನೀವೂ ನನ್ನ ಜೊತೆ ಸೇರುತ್ತೀರ?
ಖಂಡಿತ.
ಅನಂತರ–
ರಾಜಪ್ಪನ್ ಸರ್, ಈ ಪ್ಲಾಸ್ಟಿಕ್ ಸಂಗ್ರಹಿಸುವ ಕೆಲಸದಲ್ಲಿ ನಾನು ನಾಳೆ ಮತ್ತು ನಾಡಿದ್ದು ನಿಮ್ಮ ಜೊತೆ ಸೇರಬಹುದೇ?
ಖಂಡಿತವಾಗಿ. ನಾವು ಒಟ್ಟಾಗಿದ್ದರೆ ನಿಜವಾದ ವ್ಯತ್ಯಾಸ ಕಾಣಬಹುದು.
ಪ್ರಧಾನಮಂತ್ರಿ ನರೇಂದ್ರಮೋದಿಯವರು ತಮ್ಮ ಮನ್ ಕಿ ಬಾತ್‌ನಲ್ಲಿ ರಾಜಪ್ಪನ್‌ನನ್ನು ಸ್ಮರಿಸಿ, ಪ್ಲಾಸ್ಟಿಕ್ ಮಾಲಿನ್ಯದಿಂದ ನೀರನ್ನು ರಕ್ಷಿಸುವ ಅವರ ಆಯಾಸವಿಲ್ಲದ ಪ್ರಯತ್ನಗಳನ್ನು ಹೊಗಳಿದ್ದಾರೆ. ಅನಂತರ–
ರಾಜಪ್ಪನ್ ನಿಮಗೆ ಒಂದು ಅಚ್ಚರಿಯಿದೆ.
ಸರ್, ನಾವು ನಿಮಗೆ ನಿಮ್ಮ ಕೆಲಸವನ್ನು ಮೆಚ್ಚಿ ಈ ಮೋಟರ್ ದೋಣಿ ಮತ್ತು ಗಾಲಿಕುರ್ಚಿಯನ್ನು ಉಡುಗೊರೆಯಾಗಿ ನೀಡುತ್ತಿದ್ದೇವೆ.
ತನ್ನ ಹೊಸ ಮೋಟರ್ ದೋಣಿಯೊಂದಿಗೆ ರಾಜಪ್ಪನ್ ವೆಂಬನಾಡ್ ಸರೋವರ ಮಾತ್ರವಲ್ಲದೆ ಆ ಪ್ರದೇಶದ ಜಲಮಾರ್ಗಗಳನ್ನು ಶುಚಿಗೊಳಿಸುವುದನ್ನು ಮುಂದುವರಿಸಿದರು.

# ಸಿ.ವಿ. ರಾಜು




*ಆಂಧ್ರಪ್ರದೇಶದ ವಿಶಾಖಪಟ್ಟಣ ಜಿಲ್ಲೆಯಲ್ಲಿದೆ.


ಆದರೆ ರಾಜು ಕಾಲೇಜಿಗೆ ಹೋಗಿ ಬಂದ ನಂತರ, ಎಲ್ಲ ಬದಲಾಗಿತ್ತು–
ಮಕ್ಕಳು ಏಕೆ ಪ್ಲಾಸ್ಟಿಕ್ ಆಟಿಕೆಗಳೊಂದಿಗೆ ಆಟವಾಡುತ್ತಿದ್ದಾರೆ?
ಅವುಗಳನ್ನು ಅಗ್ಗವಾಗಿ ಮಾಡಬಹುದು. ಕುಶಲಕರ್ಮಿಗಳು ಬೇರೆ ಕೆಲಸಗಳಿಗಾಗಿ ನಗರದತ್ತ ಹೋಗುತ್ತಿದ್ದಾರೆ.
ರಾಜುವಿನ ಒಳಗಿದ್ದ ಹೊಳೆವ ಕಣ್ಣಿನ ಹುಡುಗ, ಎಟಿಕೊಪ್ಪಕ ಆಟಿಕೆಗಳೊಂದಿಗೆ ಬೆಳೆದವನು ಇದನ್ನು ಪ್ರತಿಭಟಿಸಿದ. ಅವನು ಏನಾದರೂ ಮಾಡಬೇಕೆಂದುಕೊಂಡ.
ಕುಶಲಕರ್ಮಿಗಳಿಗಾಗಿ ಅವರು 'ಪದ್ಮಾವತಿ ಅಸೋಸಿಯೇಟ್ಸ್' ಎಂಬ ಒಂದು ಸಹಕಾರ ಸಂಘವನ್ನು ಸ್ಥಾಪಿಸಿದರು.
ಪ್ರಾಚೀನ ಕಲೆ ನಮ್ಮ ಗ್ರಾಮದ ಹೃದಯ. ಅದನ್ನು ನಾವು ಸಾಯಲು ಬಿಡಬೇಕೆ?
ಅವರು ರಾಶಿ ರಾಶಿ ಒಂದೇ ರೀತಿ ತಯಾರಾಗುತ್ತಿದ್ದ ಆಟಿಕೆಗಳೊಡನೆ ಸ್ಪರ್ಧಿಸಬೇಕಾಗಿತ್ತು. ಆದರೆ ಅವರು ಸೋಲೊಪ್ಪಲಿಲ್ಲ.
ಅಂಕುಡು ಮರ ಸಾಕಷ್ಟು ಮೃದುವಾಗಿದ್ದು ಬೇಕಾದ ಆಕಾರಕ್ಕೆ ಸುಲಭವಾಗಿ ಮುರಿಯದಂತೆ ಕೆತ್ತಬಹುದಾಗಿತ್ತು.
ಹೆಚ್ಚಿನ ಅಂಕುಡು ಮರಕ್ಕಾಗಿ ಅರಣ್ಯ ಇಲಾಖೆಯೊಂದಿಗೆ ವ್ಯವಹರಿಸೋಣ.
ಉತ್ಪಾದನೆ ಹೆಚ್ಚಾದಂತೆ ರಾಜು, ಆಟಿಕೆಗಳನ್ನು ವ್ಯಾಪಾರ ಮೇಳಗಳಿಗೆ ತೆಗೆದುಕೊಂಡು ಹೋಗಿ ದೇಶದಾದ್ಯಂತ ಪರಿಚಯಿಸಿದರು.
ಅಂತರರಾಷ್ಟ್ರೀಯ ಮಾರುಕಟ್ಟೆಗಾಗಿ ದೊಡ್ಡ ರಫ್ತಿನ ಬೇಡಿಕೆ ಇಡಲು ನಾನು ಬಯಸುತ್ತೇನೆ.
ಅದು ಅದ್ಭುತ!
ಆದರೆ ಆ ಸಂಭ್ರಮ ಹೆಚ್ಚು ಕಾಲ ಉಳಿಯಲಿಲ್ಲ. ಹಡಗಿನ ಸರಕನ್ನು ಬೇಗನೇ ಹಿಂದೆ ಕಳಿಸಲಾಯಿತು.
ಬಣ್ಣದಲ್ಲಿ ಸೀಸದ ಗುರುತುಗಳನ್ನು ಕಾಣಲಾಯಿತೆಂದು ಹೇಳಲಾಯಿತು.
ಆಧುನಿಕ ಕೃತಕ ಬಣ್ಣಗಳಲ್ಲಿ ಇದೊಂದು ಸಮಸ್ಯೆ.
ಸಾಂಪ್ರದಾಯಿಕ ರೀತಿಗಳಿಗೆ ಹಿಂದಿರುಗಲು ಇದೇ ಸರಿಯಾದ ಸಮಯ.




*ಒಂದು Geographical Indication (GI) tag ಅಂದರೆ ಅದು ತಮ್ಮ ತಯಾರಿಕೆಯ ಸ್ಥಳದಿಂದ ಬರುವ ಉತ್ಪನ್ನಗಳ ಗುಣಲಕ್ಷಣಗಳು ಅಥವಾ ಅವುಗಳ ವಿಶ್ವಾಸಾರ್ಹತೆಯನ್ನು ಸೂಚಿಸುತ್ತದೆ.

^ಭಾರತದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿ.

# ಭಾಗೀರಥೀ ಅಮ್ಮ


ಶುಭಸುದ್ದಿ ! ಸಸ್ಯಜೀವವಿಜ್ಞಾನದಲ್ಲಿ ನಾನು ಬೇಗನೇ ನನ್ನ ಪರೀಕ್ಷೆಗಳನ್ನು ಮುಗಿಸುತ್ತೇನೆ. ಆಗ ನಮ್ಮ ಪ್ರಕೃತಿಯ ಸಂಚಾರಕ್ಕೆ ಹೋದಾಗ ನಾನು ಗಿಡಗಳು ಮತ್ತು ಮರಗಳ ಬಗ್ಗೆ ನಿಮಗೆ ಬೋಧಿಸಬಹುದು.
ಸರ್, ನೀವು ಈಗಲೂ ಕಲಿಯುತ್ತಿರುವಿರಾ? ಅದು ಹೇಗೆ ಸಾಧ್ಯ?
ನನಗೆ ತಿಳಿಯದು, ಬೆಳೆದ ಅಧ್ಯಾಪಕರೂ ಕೂಡ ಕಲಿಯಬೇಕು!
ಹೌದು, ಬೆಳೆದವರು ಕಲಿಯಬಹುದು. ಇತ್ತೀಚೆಗೆ ಮನ್ ಕಿ ಬಾತ್‌ನಲ್ಲಿ 105 ವರ್ಷದ ಒಬ್ಬರು ಅಭ್ಯಾಸ ಮಾಡಿ ಪರೀಕ್ಷೆಗಳನ್ನು ಬರೆದ ಬಗ್ಗೆ ಕೇಳಿದೆ.
ಅದು ನಿಜ ಶಾರದ. ಆಕೆಯ ಹೆಸರು ಭಾಗೀರಥೀ ಅಮ್ಮ. ಕುಳಿತುಕೊ, ನಾನು ಅವರ ಕಥೆ ಹೇಳುತ್ತೇನೆ.
ಭಾಗೀರಥಿ ಕೇರಳದ ಪ್ರಕ್ಕುಲಮ್ ಹಳ್ಳಿಯಲ್ಲಿ ವಾಸಿಸುತ್ತಿದ್ದರು. ಅವರಿಗೆ ಓದುವುದು ಬರೆಯುವುದೆಂದರೆ ಬಹಳ ಇಷ್ಟ. ಆದರೆ ಅವರಿಗೆ ಎಂಟು ವರ್ಷವಾದಾಗ ಅವರ ತಾಯಿ ತೀರಿಕೊಂಡರು.
ಭಾಗೀರಥಿ ನೀನು ಶಾಲೆಗೆ ಬರುವುದಿಲ್ಲವೆ?
ಇಲ್ಲ. ಈಗ ಅವಳು ಮನೆಯನ್ನು, ಸೋದರ ಸೋದರಿಯರನ್ನು ನೋಡಿಕೊಳ್ಳಬೇಕು.
ನನಗೆ ಕಲಿಯಲು ಇಷ್ಟ.
ಭಾಗೀರಥಿ ಮತ್ತೆ ಶಾಲೆಗೆ ಹೋಗಲಾಗಲಿಲ್ಲ. ಮುಂದೆ ಅವರು ಮದುವೆಯಾಗಿ ಆರು ಮಕ್ಕಳನ್ನು ಪಡೆದರು. ನಂತರ ಅವರ ಗಂಡ ತೀರಿಕೊಂಡರು.
ನಿಮ್ಮ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಲು ನಾನು ಬಿಡುವುದಿಲ್ಲ.
ಅಮ್ಮ, ನಾವು ಕಷ್ಟಪಟ್ಟು ಕಲಿತು ನೀನು ಹೆಮ್ಮೆ ಪಡುವಂತೆ ಮಾಡುತ್ತೇನೆ!
ಅವರ ಮಕ್ಕಳು ಬೆಳೆದಂತೆ–
ನಾನು ಈ ಪುಸ್ತಕವನ್ನು ಓದಬಹುದೆ? ನೀನು ಸಹಾಯ ಮಾಡುತ್ತೀಯ? ನನಗೆ ಇದು ಅರ್ಥವಾಗುತ್ತಿಲ್ಲ.
ಖಂಡಿತ, ಅಮ್ಮ.
ಅಮ್ಮ, ಮೊದಲು ಈ ಪುಸ್ತಕ ಓದು. ಇದು ತುಂಬ ಸ್ವಾರಸ್ಯವಾಗಿದೆ.


ಭಾಗೀರಥಿ ಅಮ್ಮನ ಶಿಕ್ಷಣ ಪಡೆಯುವ ಬಯಕೆ ಈಡೇರಲಿಲ್ಲ. 2019ರಲ್ಲಿ ಅವರಿಗೆ 105 ವರ್ಷಗಳಾದಾಗ–
ಅಮ್ಮಮ್ಮ* ನೋಡು, ಕೇರಳ ಸರಕಾರದ ಸಾಕ್ಷರತೆ ಅಭಿಯಾನ, ತಮ್ಮ ಶಿಕ್ಷಣವನ್ನು ಪೂರ್ತಿಗೊಳಿಸದ ವಯಸ್ಕರಿಗೆ ಒಂದು
ಕಾರ್ಯಕ್ರಮವನ್ನು ಪರಿಚಯಿಸಿದ್ದಾರೆ.
ತನ್ನ ವಯಸ್ಸಿನ ಪರಿಗಣನೆಯಿಲ್ಲದೆ ಭಾಗೀರಥಿ ಅಮ್ಮ ಪರೀಕ್ಷೆ ತೆಗೆದುಕೊಳ್ಳಲು ನಿರ್ಧರಿಸಿದರು.
ನಾನು ಬಹಳ ಓದಬೇಕು. ನಾನು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಬೇಕು.
ಖಂಡಿತ ನೀನು ಮಾಡುತ್ತಿ ಅಮ್ಮಮ್ಮ. ನಿನ್ನ ಜೊತೆ ನಾವೆಲ್ಲ ಇದ್ದೇವಲ್ಲ.
ಹಲವು ತಿಂಗಳುಗಳ ಕಠಿಣ ಶ್ರಮದ ನಂತರ ಭಾಗೀರಥಿ ಅಮ್ಮ ಗಣಿತ, ಮಲಯಾಳಂ ಮತ್ತು ಪರಿಸರ ವಿಜ್ಞಾನದಲ್ಲಿ ಪರೀಕ್ಷೆ ತೆಗೆದುಕೊಂಡರು.
ನಂತರ–
ಅಮ್ಮಮ್ಮ, ನೀನು ಸಾಧಿಸಿದೆ! ನಿನಗೆ 275ಕ್ಕೆ 205 ಅಂಕಗಳು ಬಂದಿವೆ !
ನೋಡು, ನಾನು ಹೇಳಿದ್ದೆ! ನನಗೆ ವಯಸ್ಸಾಗಿರಬಹುದು, ಆದರೆ ಕಲಿಯುವ ಆಸಕ್ತಿಯಲ್ಲಿ ನಾನು ಇನ್ನೂ ಚಿಕ್ಕವಳು.
2019ರಲ್ಲಿ ಭಾಗೀರಥಿ ಅಮ್ಮನವರಿಗೆ ಭಾರತದ ಅತ್ಯುನ್ನತ ಮಹಿಳೆಯರ ನಾಗರಿಕ ಗೌರವ ನಾರಿಶಕ್ತಿ ಪುರಸ್ಕಾರವನ್ನು ನೀಡಲಾಯಿತು.
मन की बात
ನಾವು ಜೀವನದಲ್ಲಿ ಏನಾದರೂ ಸಾಧಿಸಬೇಕೆಂದರೆ, ಮೊದಲ ನಿಯಮವೇನೆಂದರೆ ನಮ್ಮಲ್ಲಿರುವ ವಿದ್ಯಾರ್ಥಿ ಎಂದೂ ಸಾಯಬಾರದು.

*ಮಲಯಾಳಂನಲ್ಲಿ ಅಜ್ಜಿ

# ರಾಜೇಂದ್ರ ಜಾಧವ್



ಇನ್ನು ಕೋವಿಡ್‌ನಿಂದ ದೊಡ್ಡ ಬೆದರಿಕೆಯಿಲ್ಲ ಎಂದು ನಿನಗೆ ಸಂತೋಷವಾಗಿದೆಯಲ್ಲವೆ?
ಹೌದು ಸರ್! ನಮ್ಮನ್ನು ಸುರಕ್ಷಿತವಾಗಿಡಲು ಕೆಲಸ ಮಾಡಿದ ಎಲ್ಲರಿಗೂ ಧನ್ಯವಾದಗಳು.
ಬಹಳ ನಿಜ. ನಮ್ಮನ್ನು ಸುರಕ್ಷಿತವಾಗಿಡಲು ಕಷ್ಟಪಟ್ಟು ಕೆಲಸ ಮಾಡಿದ ಆರೋಗ್ಯ ಕಾರ್ಯಕರ್ತರಿಗೆ ನಾವು ಋಣಿಗಳಾಗಿದ್ದೇವೆ. ಇದರಲ್ಲಿ ರಾಜೇಂದ್ರ ಜಾಧವ್ ಅವರ ಕೊಡುಗೆಯನ್ನು ಹೇಳುತ್ತೇನೆ.
ಇದು ಮನ್ ಕಿ ಬಾತ್‌ನ ಕಥೆಯೇನು?
ನಾಯರ್ ಸರ್ ನಕ್ಕು ತಲೆಯಾಡಿಸಿದರು.
2022ರಲ್ಲಿ ಮಹಾರಾಷ್ಟ್ರದ ಸತಾನದಲ್ಲಿ ಒಬ್ಬ 62 ವರ್ಷದ ವ್ಯಕ್ತಿ ವಿಷಾದದಿಂದ ವಾರ್ತೆಗಳನ್ನು ನೋಡುತ್ತಿದ್ದರು. .....ನಾಶಿಕ್
ಕೋವಿಡ್-19ರ ಕೆಂಪು ವಲಯವಾಗಿದೆ.
ನನ್ನ ನಗರ ಅಪಾಯದಲ್ಲಿದೆ.
ಅವರೇ ರಾಜೇಂದ್ರ ಜಾಧವ್. ಕೃಷಿ ಉಪಕರಣಗಳನ್ನು ಮಾಡುವುದರಲ್ಲಿ ಹಲವು ವರ್ಷಗಳ ಅನುಭವವುಳ್ಳ ಸ್ವಯಂಕಲಿತ ಎಂಜಿನಿಯರ್.
ಕೈಗಳನ್ನು ತೊಳೆದುಕೊಳ್ಳುವುದು ಮತ್ತು ಮಾಸ್ಕ್ ಧರಿಸುವುದು ನೆನಪಿರಲಿ!
ಸಣ್ಣ ಪ್ರಮಾಣದ ಸ್ಯಾನಿಟೇಷನ್ (ಶುಚಿಸಾಧನ) ಸಾಲುವುದಿಲ್ಲ. ಈ ವೈರಸ್ ಹಬ್ಬದಂತೆ ತಡೆಯಲು ದೊಡ್ಡ ಪ್ರಮಾಣವೇ ಬೇಕು.

# ರಾಜೇಂದ್ರ ಜಾಧವ್




*NIF ತಂತ್ರಜ್ಞಾನದಲ್ಲಿ ಮೂಲಭೂತ ಪುನರ್ನವೀಕರಣಕ್ಕಾಗಿ ಬೆಂಬಲ ನೀಡುವ ಮತ್ತು ಉಸ್ತುವಾರಿ ನೋಡುವ ಒಂದು ಸಂಸ್ಥೆ.

# ಗಾಯತ್ರಿ













*Information Technology (ಮಾಹಿತಿ ತಂತ್ರಜ್ಞಾನ)




*ಗಾಯತ್ರಿಯ ತಂದೆ ಕಾಶಿಲಿಂಗಮ್ ಒಬ್ಬ ಮೆಕ್ಯಾನಿಕಲ್ ಇಂಜಿನಿಯರ್ ಆಗಿದ್ದರು.


ಚಕ್ರಗಳನ್ನು ನಾವು ಈ ಪಟ್ಟಿಗಳಿಂದ ವೀರೂನ ಕವಚಕ್ಕೆ ಕಟ್ಟಬಹುದು. ಆದರೆ ಪಿವಿಸಿ ಪೈಪುಗಳು ಏಕೆ?
ವೀರೂ ನಡೆಯಲು ಮತ್ತು ಓಡಲು ಸುಲಭವಾಗುವಂತೆ ನಾನು ಈ ಪೈಪುಗಳಿಂದ ಕೃತಕ ಕಾಲುಗಳನ್ನು ಮಾಡುತ್ತಿದ್ದೇನೆ.
ಅದು ಅದ್ಭುತ! ವೀರುಗೆ ಹಿತಕಾರಿಯಾಗುವಂತೆ ಪೈಪು ದೇಹಕ್ಕೆ ತಾಗುವ ಕಡೆ ನಾನು ಮೆತ್ತೆಯನ್ನು ಅಳವಡಿಸುತ್ತೇನೆ.
ಬೇಗನೇ–
ನಾಯಿಗಾಡಿಯನ್ನು ಪರೀಕ್ಷಿಸುವ ಸಮಯ. ವೀರು ಅಲ್ಲಾಡದೆ ನಿಲ್ಲು!
ಕೆಲವೇ ದಿನಗಳ ಅಭ್ಯಾಸದ ನಂತರ–
ವೀರು ಚಲಿಸುತ್ತಿದ್ದಾನೆ ನೋಡು.
ಅವನು ತೊಂದರೆಯಿಲ್ಲದೆ ಓಡುತ್ತಿದ್ದಾನೆ.
ಅಲ್ಲಿ ಒಬ್ಬ ಉತ್ಸಾಹೀ ವ್ಯಕ್ತಿಯಿದ್ದಾನೆ.
ಧನ್ಯವಾದಗಳು! ಅವನು ಬಹಳ ದೂರದಿಂದ ಬಂದಿದ್ದಾನೆ.
ಹೆಚ್ಚು ಜನ ಅಂಗವಿಕಲ ಸಾಕುಪ್ರಾಣಿಗಳನ್ನು ದತ್ತು ಪಡೆದು ಅವುಗಳ ಜೀವನಮಟ್ಟವನ್ನು ಸುಧಾರಿಸಲು ಪ್ರಯತ್ನಿಸಬೇಕೆಂದು ಗಾಯತ್ರಿ ನಿರೀಕ್ಷಿಸುತ್ತಾರೆ.



# ಮನ್ ಕಿ ಬಾತ್

**ಸಂಪುಟ–2**

ಮನ್ ಕಿ ಬಾತ್ ಎರಡನೇ ಭಾಗ ವ್ಯಕ್ತಿಯ ಶಕ್ತಿಯನ್ನು ಸಂಭ್ರಮಿಸುವುದನ್ನು ಮುಂದುವರಿಸಿದೆ. ನರೇಂದ್ರ ಮೋದಿಯವರು ತಮ್ಮ ರೇಡಿಯೋ ಕಾರ್ಯಕ್ರಮದಲ್ಲಿ ತಮ್ಮ ಜೀವನದಲ್ಲಿ ಪವಾಡಗಳನ್ನು ಸಾಧಿಸಿದ ನೂರಾರು ಪುರುಷರು ಮಹಿಳೆಯರ ಕೊಡುಗೆಗಳನ್ನು ಪ್ರಕಾಶಪಡಿಸಿದ್ದಾರೆ.

ಇವೆಲ್ಲ ನಿಜಜೀವನದ ನಾಯಕರ ಕಥೆಗಳು.

ಭಾಗೀರಥಿ ಅಮ್ಮ ಬಾಲಕಿಯಾಗಿದ್ದಾಗ ತನ್ನ ಒಡಹುಟ್ಟಿದವರನ್ನು ನೋಡಿಕೊಳ್ಳಲು ಶಾಲೆಯನ್ನು ಬಿಟ್ಟರು. ಆದರೆ ಅವರು ತಮ್ಮ 105ನೇ ವಯಸ್ಸಿನಲ್ಲಿ ಮುತ್ತಜ್ಜಿಯಾದ ಮೇಲೆ ನಾಲ್ಕನೇ ತರಗತಿಯ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಎನ್.ಎಸ್. ರಾಜಪ್ಪನ್ ಐದನೇ ವರ್ಷದಲ್ಲಿ ಪೋಲಿಯೊ ಪೀಡಿತರಾದರು. ಅದನ್ನು ಲೆಕ್ಕಿಸದೆ ತಮ್ಮ 69ನೇ ವಯಸ್ಸಿನಲ್ಲಿ ಎಚ್ಚರಗೇಡಿ ಪ್ರವಾಸಿಗರು ಎಸೆದ ಪ್ಲಾಸ್ಟಿಕ್ ಬಾಟಲುಗಳು, ಕವರುಗಳನ್ನು ತೆಗೆದು ವೆಂಬನಾಡು ಸರೋವರವನ್ನು ಶುಚಿಗೊಳಿಸಿದರು.

ಉಷಾ ದುಬೆ, ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಬಡ ಮಕ್ಕಳಿಗೆ ಆನ್‌ಲೈನ್ ತರಗತಿಗಳು ಸಾಧ್ಯವಿಲ್ಲವೆಂದು ಅರಿತುಕೊಂಡರು, ತಮ್ಮ ಸ್ಕೂಟರಿನ ಮೇಲೆ ಅವರ ಬಳಿಗೆ ಶಾಲೆಯನ್ನೇ ತೆಗೆದುಕೊಂಡು ಹೋದರು.

ಸಾಧನೆ ಮಾಡಲು ಹೆಚ್ಚು ಹಣ ಅಥವಾ ಸ್ಥಾನಮಾನಗಳು ಬೇಕಾಗಿಲ್ಲ. ಈ ನಾಯಕರು ಅದನ್ನು ಸಾಧಿಸಿ ತೋರಿಸಿದ್ದಾರೆ.



₹90

www.amarchitrakatha.com
ISBN 978-81-19242-56-6
9 788119 242566